

## ವ್ಯತ್ಯಾಸ

ರಾಮು: ಗರ್ಲ್ ಫ್ರೆಂಡ್ ಮತ್ತು ಹೆಂಡತಿಗಿರುವ ವ್ಯತ್ಯಾಸವೇನು?

ಗೋಪಿ: ಗರ್ಲ್ ಫ್ರೆಂಡ್ ನಿನ್ನೆಲ್ಲಾ ಪ್ರಶ್ನೆಗಳಿಗೂ ಉತ್ತರ ನೀಡುತ್ತಾಳೆ. ಹೆಂಡತಿ ನಿನ್ನೆಲ್ಲಾ ಉತ್ತರಗಳನ್ನೂ ಪ್ರಶ್ನಿಸುತ್ತಾಳೆ!

## ಲವ್– ಹೇಟ್!

21ನೇ ಶತಮಾನದ ಮಕ್ಕಳ ಟೀ ಶರ್ಟ್ ಮೇಲೆ ಬರೆದಿರುವ ಹೊಸ ಸ್ಲೋಗನ್:

'ಐ ಲವ್ ಫೇಸ್ ಬುಕ್, ಬಟ್ ಐ ಹೇಟ್ ಟು ಫೇಸ್ ದ ಬುಕ್!'

## ಎಚ್ಚರಿಕೆ!

ರಸ್ತೆ ಬದಿಯಲ್ಲಿ ವಾಕಿಂಗ್ ಹೋಗುತ್ತಿದ್ದ ಚೆಂದುಳ್ಳಿ ಚೆಲುವೆಯೊಬ್ಬಳ ಟಿ–ಶರ್ಟ್ ಮೇಲೆ ಬರೆದ ವಾಕ್ಯವೊಂದು ಹೀಗಿತ್ತು:

'ನಿಮ್ಮ ಗಮನವೀಗ ರಸ್ತೆಯ ಮೇಲಿಲ್ಲ, ಎಚ್ಚರಿಕೆ...!'




## ಸಾಹಸ!

ಹುಡುಗಿಯರ ಸಾಹಸ ಪ್ರವೃತ್ತಿಯ ಪರಾಕಾಷ್ಠೆಯೆಂದರೆ...

ಮೇಕಪ್ ಮಾಡಿಕೊಳ್ಳದೆಯೇ ಮನೆಯಿಂದ ಹೊರಗೆ ಹೊರಟು ಬಿಡುವುದು!

## ಸಮಾನ ಮನಸ್ಕರು

ಪುರುಷರನ್ನು ಪುರುಷರೇ ಚೆನ್ನಾಗಿ ಅರ್ಥ ಮಾಡಿಕೊಳ್ಳ ಬಲ್ಲವರಾಗಿದ್ದಾರೆ. ಉದಾಹರಣೆಗೆ;

ಗೋಪಿ: ಒಂದು ಲೇಡೀಸ್ ವಾಚ್ ತೋರಿಸಿ.

ಅಂಗಡಿಯಾತ: ವಾಚ್ ನಿಮ್ಮ ಪತ್ನಿಗಾಗಿಯೇ ಅಥವಾ... ಯಾವುದಾದರೂ ಒಳ್ಳೆಯ ಬ್ರಾಂಡೆಡ್ ವಾಚ್ ತೋರಿಸಲೆ?!



## ಆಯ್ಕೆ

ಸ್ತ್ರೀಯರು ತಮ್ಮ ಗಂಡಂದಿರ ಯಾವುದೇ ತೀರ್ಮಾನವನ್ನು ಎಷ್ಟೇ ಟೀಕಿಸಿದರೂ, ಗಂಡ ತನ್ನ ಪತ್ನಿಯ ಆಯ್ಕೆಯಲ್ಲಿ ತೆಗೆದುಕೊಂಡ ನಿರ್ಧಾರವನವನ್ನೆಂದೂ ಪ್ರಶ್ನಿಸುವುದಿಲ್ಲ!

## ನಾಚಿಕೆ?

ಭಿಕ್ಷುಕ: ದಯವಿಟ್ಟು ಈ ವೃದ್ಧನ ಮೇಲೆ ಕರುಣೆ ತೋರಿಸಿ...

ಗೋಪಿ: ನೀನೇಕೆ ಭಿಕ್ಷೆ ಬೇಡುತ್ತಿರುವೆ? ನಿನಗ್ಯಾಕೆ ಮಕ್ಕಳಿಲ್ಲವೆ?

ಭಿಕ್ಷುಕ: ನಾಲ್ಕು ಮಂದಿ ಇದು ಅವರೆಲ್ಲ ದೂರದಲ್ಲಿದ್ದಾರೆ. ಒಬ್ಬ ದುಬೈನಲ್ಲಿ, ಇನ್ನೊಬ್ಬ ಅಮೆರಿಕಾದಲ್ಲಿ, ಮತ್ತೊಬ್ಬ ಇಂಗ್ಲೆಂಡಿನಲ್ಲಿ, ಕಿರಿಯವ ಜಪಾನಿನಲ್ಲಿ ನೆಲೆಸಿದ್ದಾರೆ.

ಗೋಪಿ: ಭಿಕ್ಷೆ ಬೇಡಲು ನಾಚಿಕೆ ಆಗಲ್ವೆ?

ಭಿಕ್ಷುಕ: ನಾಚಿಕೆಯೇಕೆ ಸ್ವಾಮಿ? ಅವರೆಲ್ಲರೂ ವಿದೇಶಗಳಲ್ಲಿ ಇದೇ ಉದ್ಯೋಗದಲ್ಲಿದ್ದಾರೆ...!

## ನಿರಾಸೆ

ಪಾರ್ಟಿಯೊಂದರಲ್ಲಿ ಒಬ್ಬಾಕೆ ಸುಂದರಿ ಗೋಪಿಯ ಬಳಿ ಬಂದು ಮೆಲ್ಲನೆ ಉಸುರಿದಳು, 'ನೀವು ಡ್ಯಾನ್ಸ್ ಮಾಡುವಿರೇನು?'

ಗೋಪಿ ಅತ್ಯಂತ ಸಂತುಷ್ಟನಾಗಿ ಹೌದೆಂದ. ಹುಡುಗಿ ಪ್ರತಿಕ್ರಿಯಿಸಿದಳು, 'ತುಂಬಾ ಒಳ್ಳೆಯದು, ನೀವು ಡ್ಯಾನ್ಸ್ ಮಾಡಲು ಹೊರಡುವುದಾದರೆ... ನಾನು ನಿಮ್ಮ ಕುರ್ಚಿಯನ್ನು ಬಳಸಿಕೊಳ್ಳಲೆ?'

(ಸಂಗ್ರಹ):ರಮಣ್‌ಶೆಟ್ಟಿ ರೆಂಜಾಳ್, ಮುಂಬೈ



ಈಗ !!
ಗಣಿತ, ಇಂಗ್ಲಿಷ್ ಮತ್ತು ವಿಜ್ಞಾನ ಬಹಳ ಸುಲಭ ಎನಿಸುತ್ತದೆ




● ಬ್ರಾಹ್ಮಿ ಜ್ಞಾಪಕ ಶಕ್ತಿ ಸುಧಾರಿಸುತ್ತದೆ.
● ವಿದ್ಯಾರ್ಥಿಗಳು ಚೆನ್ನಾಗಿ ಓದಲು ಮತ್ತು ಹೆಚ್ಚು ಅಂಕ ಪಡೆಯಲು ಸಹಕಾರಿ

ಬೈದ್ಯನಾಥ್
ಶಂಖಪುಷ್ಪಿ

Doctor's consultation at Baidyanath Clinic, Civil Lines, Nagpur. Mob. 8888977368